ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರ ಪ್ರಶ್ನೆ ಅರ್ಥವಾಗಲಿಲ್ಲ.

ಶ್ರೀ ಐ. ಬಿ. ಶಂಕರ್.—ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಂನಲ್ಲಿ ಸಹಾಯಧನವನ್ನು ಪಡೆದು ಕೊಂಡವರಹೆಸರುಗಳನ್ನು ಮುಂದೆಂವರಿಸಿಕೊಂಡು ಹೋಗುತ್ತೀರಾ ? ಅಥವಾ ಲಿಸ್ಟ್‌ನಿಂದ ತೆಗೆದು ಹಾಕಂತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಎಂಪ್ಲಾಯ್‌ಮೆಂಟ್ ರಿಜಿಸ್ಟರ್‌ನಲ್ಲಿ ಅವರ ಹೆಸರು ಇರುತ್ತದೆ. ಅವರಿಗೆ ಬೇರೆ ಉದ್ಯೋಗ ಬೇಡವಾದರೆ ಅವರ ಹೆಸರು ಹೋಗಂತ್ತದೆ. ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಂನಲ್ಲಿ ಅವರ ಹೆಸರು ಇರುತ್ತದೆ.

ರಾಜ್ಯದಲ್ಲಿರುವ ಸರಕಾರಿ ವಿದ್ಯಾರ್ಥಿನಿಲಯಗಳು

೬೪೧ (ಇ) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಸರ್ಕಾರಿ ವಿದ್ಯಾರ್ಥಿ ಗೃಹಗಳ ಸಂಖ್ಯೆ ಎಷ್ಟು? ಜಿಲ್ಲಾವಾರ ವಿವರ ನೀಡುವುದು,

ಆ) ಸರ್ಕಾರಿ ವಸತಿ ಗೃಹಗಳಲ್ಲಿ ಈಗಿರುವ ಗ್ರಾಮೀಣ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? ಹಾಗೂ ಅವರ ಸಲುವಾಗಿಯೇ ಸ್ಥಳ ಕಾಯ್ದಿರಿಸುವ ಯೋಜನೆ ಇದೆಯೇ?

ಇ) ಖಾಸಗಿ ವಿದ್ಯಾರ್ಥಿಗಳ ವಸತಿ ಗೃಹಗಳು ಎಷ್ಟು? ಹಾಗೂ ಆದರಲ್ಲಿ ಸರ್ಕಾರದವರಿಂದ ಅನುದಾನ ಪಡೆಯುತ್ತಿರುವ ವಸತಿ ಗೃಹಗಳ ಸಂಖ್ಯೆಗಳು ಎಷ್ಟು?

ಈ) ಗ್ರಾಮೀಣ ಪ್ರದೇಶ ಎಲ್ಲಾ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ವಸತಿ ಗೃಹಗಳ ಸೌಲಭ್ಯವನ್ನು ಒದಗಿಸಲಾಗುವುದೇ?

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ೧೩೬೩, ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ.

ಆ) ಒಔ,೩೮೬ ಎಲ್ಲರೂ ೮ ಕಿ.ಮೀ. ದೂರದಿಂದ ಬಂದವರೇ ಆಗಿರಂತ್ತಾರೆ. ಈ ವಿದ್ಯಾರ್ಥಿಗಳಿಗಾಗಿಯೇ ಸ್ಥಳ ಕಾಯ್ದಿರಿಸುವ ಯೋಜನೆ ಇದೆ.

ಇ) ೫೧೬, ಇವುಗಳೆಲ್ಲವೂ ಸರ್ಕಾರದಿಂದ ಅನುದಾನ ಪಡೆಯುತ್ತಿವೆ. ಇವುಗಳಲ್ಲಿ ಖಳ ಖಾಸಗಿ ಕಾಲೇಜು ವಿದ್ಯಾರ್ಥಿನಿಲಯಗಳಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗಾಗಿ ಖಾಸಗಿ ಸಂಸ್ಥೆಯವರು ನಡೆಸುತ್ತಿದ್ದಾರೆ.

ಈ) ಹಣ ಸೌಕರ್ಯಕ್ಕನುಗುಣವಾಗಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲಾಗುತ್ತಿದೆ.

ಸರ್ಕಾರಿ ವಿದ್ಯಾರ್ಥಿನಿಲಯಂಗಳ ಜಿಲ್ಲಾವಾರು ಪಟ್ಟಿ

		ಮೆಟ್ರಿಕ್ ಪೂರ್ವ	ಮೆಟ್ರಿಕ್ ನಂತರ
೧	ಬೆಂಗಳೂರು ನಗರ	೨೭	೬
೨	ಬೆಂಗಳೂರು (ಗ್ರಾಮಾಂತರ)	೫೪	೧
೩	ಚಿತ್ರದುರ್ಗ	೬೫	೨೧
೪	ಕೋಲಾರ	೭೭	೧೪
೫	ತುಮಕೂರು	೬೧	೧೮
೬	ಶಿವಮೊಗ್ಗ	೬೩	೫
೭	ಮೈಸೂರು	೮೪	೮
೮	ಮಂಡ್ಯ	೪೮	೭
೯	ಹಾಸನ	೫೨	೬
೧೦	ಚಿಕ್ಕ ಮಗಳೂರು	೪೪	೩
೧೧	ಕೊಡಗು	೩೫	೨
೧೨	ದಕ್ಷಿಣ ಕನ್ನಡ	೬೩	೭
೧೩	ಬೆಳಗಾಂ	೭೯	೩
೧೪	ಬಿಜಾಪುರ	೭೧	೫
೧೫	ಧಾರವಾಡ	೧೦೦	೭
೧೬	ಉತ್ತರ ಕನ್ನಡ	೫೪	೩
೧೭	ಬೀದರ್	೪೬	೨
೧೮	ಗುಲ್ಬರ್ಗಾ	೮೯	೧೦
೧೯	ರಾಯಚೂರು	೬೩	೫
೨೦	ಬಳ್ಳಾರಿ	೫೧	೪
	ಒಟ್ಟು	೧೨೨೬	೧೩೭

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಮಾನ್ಯ ಸಭಾಧ್ಯಕ್ಷರೇ, ನಾನು ಮೂರು ಪ್ರಶ್ನೆಗಳನ್ನು ಕೇಳುತ್ತಿದ್ದೇನೆ. ವಿದ್ಯಾರ್ಥಿನಿಲಯಗಳಲ್ಲಿ ಕೇವಲ ಆಯಾ ತಾಲ್ಲೂಕಿನಿಂದಲೇ ಬರತಕ್ಕಂಥ ವಿದ್ಯಾರ್ಥಿಗಳಿಗೆ ವ್ಯವಸ್ಥೆಯನ್ನು ಮಾಡಿದ್ದೀರಾ? ಹಾಗೆ ಮತ್ತೊಂದು ಪ್ರಶ್ನೆ ಏನೆಂದರೆ, ಖಾಸಗಿ ಅನುದಾನ ಪಡೆದು ನಡೆಸುತ್ತಿರುವ ವಿದ್ಯಾರ್ಥಿ ನಿಲಯಂಗಳಿಗೂ ಮತ್ತು ಸರ್ಕಾರದಿಂದ ನಡೆಸುತ್ತಿರುವ ವಿದ್ಯಾರ್ಥಿ ನಿಲಯಂಗಳಿಗೂ ವ್ಯತ್ಯಾಸವಿರುತ್ತದೆ. ಸರ್ಕಾರಿ ವಿದ್ಯಾರ್ಥಿನಿಲಯಗಳಿಗೆ ಕೊಡುತ್ತಿರುವಷ್ಟು ಹಣವನ್ನು ಖಾಸಗಿಯ ವಿದ್ಯಾರ್ಥಿ ನಿಲಯಗಳಿಗೆ ಕೊಡುತ್ತಿಲ್ಲ. ಈ ಕೊರತೆಯಂನ್ನು ನೀಗಿಸುತ್ತೀರಾ? ಮೂರನೆಯದಾಗಿ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕಂಥ ವಿದ್ಯಾರ್ಥಿಗಳಿಗೆ ತಾಲ್ಲೂಕಿನಲ್ಲಿ ಇರತಕ್ಕಂಥ ಪ್ರಸಾದ ನಿಲಯಗಳಲ್ಲಿ ಉಳಿದುಂಕೊಳ್ಳುವುದಕ್ಕೆ ವ್ಯವಸ್ಥೆಯನ್ನೂ ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣೆಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಆಯಾ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿ ಅವಕಾಶ ಮಾಡಿಕೊಟ್ಟಿರುವ ಹಾಗೆ ಗ್ರಾಮಾಂತರ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳು ಅಂದರೆ ಎಂಟು ಕಿಲೋಮೀಟರ್ ದೂರದಿಂದ ಬರತಕ್ಕಂಥ ವಿದ್ಯಾರ್ಥಿಗಳಿಗೆ ಅವಕಾಶದ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಮತ್ತೆ ಖಾಸಗಿ ವಿದ್ಯಾರ್ಥಿನಿಲಯಂಗಳಿಗೆ ಕೊಡತಕ್ಕಂಥ ಅನುದಾನದಲ್ಲಿ ವ್ಯತ್ಯಾಸ ವಿರುವುದರಿಂದ ಊಟ ವಸತಿಗೆ ಖಾಸಗಿ ವಿದ್ಯಾರ್ಥಿನಿಲಯಂಗಳಲ್ಲಿ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಪ್ರೀಮೆಟ್ರಿಕ್ ಎಂದರೆ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಗ್ರಾಂಟನ್ನು ಕೊಡುತ್ತಿದ್ದೇವೆ. ಖಾಸಗೀ ವಿದ್ಯಾರ್ಥಿ

ನಿಲಯಗಳಿಗೂ ಮತ್ತು ಸರ್ಕಾರಿ ವಿದ್ಯಾರ್ಥಿನಿಲಯಗಳಿಗೂ ಕೊಡತಕ್ಕಂಥ ಗ್ರಾಂಟ್‌ನಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿ ಒಬ್ಬ ವಿದ್ಯಾರ್ಥಿಗೆ ೧೦೦ ರೂಪಾಯಿ ಗ್ರಾಂಟ್ ಕೊಡುತ್ತಿರುವಂತೆ ಖಾಸಗಿಯವರಿಗೂ ಕೊಡುತ್ತಿದ್ದೇವೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಪ್ರಸಾದ ನಿಲಯಗಳಿಗೆ ಕೊಡುತ್ತಿರತಕ್ಕಂಥ ಗ್ರಾಂಟು ಸಾಲುವುದಿಲ್ಲವೆನ್ನುವ ಬೇಡಿಕೆ ಇರುತ್ತದೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.—ಇದು ಸರ್ಕಾರದ ಗಮನಕ್ಕೆ ಬಂದಿದೆ. ಸರ್ಕಾರ ಅದನ್ನು ಪುನರ್ ವಿಮರ್ಶಿಸುವ ಆಲೋಚನೆಯಲ್ಲಿದೆ.

ಹತ್ತಿ ಕೈ ಮಗ್ಗ ನೇಕಾರರ ಸಹಕಾರಿ ಸಂಘದ ಆರ್ಥಿಕ ಪರಿಸ್ಥಿತಿ

೬೮೬. ಕೆ.ಬಿ. ಕೋಳಿವಾಡ, (ರಾಣೆಬೆನ್ನೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರವು ಕರ್ನಾಟಕ ರಾಜ್ಯ ಹತ್ತಿ ಕೈ ಮಗ್ಗ ನೇಕಾರರ ಸಹಕಾರಿ ಸಂಘವನ್ನು ವಶಕ್ಕೆ ತೆಗೆದುಕೊಂಡಾಗ ಸದರಿ ಸಂಘದ ಆರ್ಥಿಕ ಪರಿಸ್ಥಿತಿ ಹೇಗಿತ್ತು ಮತ್ತು ಆ ವರ್ಷ ಎಷ್ಟು ಲಾಭ ಗಳಿಸಿತ್ತು?

ಆ) ಸದರಿ ಸಂಘವನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವಂತಹ ಬಲವಾದ ಕಾರಣಗಳಾವುವು?

ಇ) ಸದರಿ ಸಂಘವನ್ನು ಸರ್ಕಾರದ ಆಡಳಿತಾಧಿಕಾರಿ ವಶಕ್ಕೆ ಬಂದಾಗಿನಿಂದ ಪ್ರತಿ ವರ್ಷದ ಲಾಭವೆಷ್ಟು?

ಈ) ಸಂಘವನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಾಗ ಸಂಘದ ಮಾರಾಟ ಮಳಿಗೆಗಳೆಷ್ಟು ಇದ್ದುವು? ಈಗ ಎಷ್ಟು ಮಳಿಗೆಗಳಿವೆ?

ಉ) ಸದರಿ ಸಂಘದಲ್ಲಿರುವ ಸೈಜಿಂಗ್ ಪ್ಲಾಂಟ್ ಬಂದ್ ಮಾಡಲು ಕಾರಣಗಳೇನು?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಸಂಘದ ಆರ್ಥಿಕ ಪರಿಸ್ಥಿತಿ ಸಮಾಧಾನಕರವಾಗಿರಲಿಲ್ಲ. ಈ ಸಂಘವನ್ನು ೧೯೮೪ನೇ ಡಿಸೆಂಬರ್ ಮಾಹೆಯಲ್ಲಿ ಸರ್ಕಾರದ ವಶಕ್ಕೆ ತೆಗೆದುಕೊಂಡಿದೆ. ಆ ವರ್ಷ ಸಂಘವು ಲಾಭ ಗಳಿಸಿರುವುದಿಲ್ಲ.

ಆ) ಸಂಘದ ಆಡಳಿತ ನಿರ್ವಹಣೆ ತೀರ ಹದಗಟ್ಟಿದ್ದು, ಸಂಘದ ವ್ಯವಹಾರಗಳಲ್ಲಿನ ಲೋಪ ದೋಷಗಳನ್ನು ಆಡಿಟ್ ವರದಿ, ಭಾರತೀಯ ರಿಜರ್ವ್ ಬ್ಯಾಂಕ್ ಒಳಗೊಂಡಂತೆ ಇನ್ನೂ ಅನೇಕ ತನಿಖಾ ವರದಿಗಳಲ್ಲಿ ಸಮೂಹಿಸಿದ್ದಾಗ್ಯೂ, ಅವುಗಳನ್ನು ಸರಿಪಡಿಸಲು, ಆಡಳಿತ ವಂಡಳಿಯು ಕ್ರಮ ತೆಗೆದುಕೊಳ್ಳದಿರುವುದು ಮತ್ತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ೧೯೫೯ ಮತ್ತು ನಿಯಮಗಳು ೧೯೬೦, ಬೈಲಾ ಉಲಂಘನೆಗಳಿಂದಾಗಿ, ಸಂಘಕ್ಕೆ ವಿಶೇಷಾಧಿಕಾರಿಗಳ ನೇಮಕ ಅನಿವಾರ್ಯವಾಯಿತು.

ಇ) ವಿಶೇಷಾಧಿಕಾರಿಗಳು ನೇಮಕಗೊಂಡ ನಂತರದ ಅವಧಿಯಲ್ಲೂ ಸಂಘವು ಲಾಭವನ್ನು ಗಳಿಸಿರುವುದಿಲ್ಲ.

ಈ) ವಿಶೇಷಾಧಿಕಾರಿಗಳು ನೇಮಕಗೊಂಡಾಗ ೭೭ ಮಾರಾಟ ಮಳಿಗೆಗಳಿದ್ದು ಈಗ ೬೪ ಮಳಿಗೆಗಳು ಮಾತ್ರ ಇರುತ್ತವೆ.

ಉ) ಸೈಜಿಂಗ್ ಪ್ಲಾಂಟ್ ಇನ್ನೂ ಕೆಲಸವನ್ನು ಪ್ರಾರಂಭ ಮಾಡದಿರುವುದರಿಂದ ಅದನ್ನು ಮುಚ್ಚುವ ಪ್ರಶ್ನೆ ಉದ್ಭವಿಸದು

ಶ್ರೀ ಕೆ. ಬಿ.ಕೋಳಿವಾಡ.—ಸನ್ಮಾನ್ಯ ಅಧ್ಯಕ್ಷರೇ ಕರ್ನಾಟಕ ರಾಜ್ಯ ಹತ್ತಿ ಕೈಮಗ್ಗ ನೇಕಾರ ಸಹಕಾರಿ ಸಂಘವನ್ನು ಸರ್ಕಾರ ೧೯೮೩-೮೪ನೇ ಸಾಲಿನಲ್ಲಿ ತನ್ನ ವಶಕ್ಕೆ ತೆಗೆದುಕೊಂಡಿತು. ೩ ವರ್ಷದಲ್ಲಿ ನಷ್ಟವಾದರೂ ಸಹಿತ ೧೯೮೨-೮೩ರಲ್ಲಿ ಸುಮಾರು ೧೮ ಲಕ್ಷ ರೂಪಾಯಿ, ೧೯೮೧-೮೨ರಲ್ಲಿ